ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಶೈಶಾ:04/ದಾ.ವೇ.02/ದಾ.ವೇ.ಶೈ.ಚ./2018-19 ದಿನಾಂಕ[illegible]-07-2019

# ಸುತ್ತೋಲೆ

ವಿಷಯ: 2019-20ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ದಾಖಲಾತಿ ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದಿಂದ ಅನುಮೋದಿಸಲ್ಪಟ್ಟ ಏಕ ಕಡತದ ಸಂಖ್ಯೆ: ಪಪೂಶಿಇ/ಶೈಶಾ.04/ದಾ.ವೇ.ಶೈ.ಚ./2017-18

2. 2019-20ನೇ ಸಾಲಿನ ಮಾರ್ಗಸೂಚಿಗಳು
3. ಈ ಕಚೇರಿಯ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ: 30-04-2019
4. ಈ ಕಚೇರಿಯ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ: 27-05-2019
5. ಈ ಕಚೇರಿಯ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ: 14-06-2019

***

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2019-20ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾಗಲು ವಿಶೇಷ ದಂಡ ಶುಲ್ಕ(ರೂ.2890/-(ರೂ.2220/- + ರೂ.670/-))ದೊಂದಿಗೆ ದಿನಾಂಕ: 15-07-2019 ಕೊನೆಯ ದಿನವಾಗಿತ್ತು. ಆದರೂ ಸಹ ಕೆಲವೊಂದು ವಿದ್ಯಾರ್ಥಿಗಳು/ಪೋಷಕರು ಕಾರಣಾಂತರಗಳಿಂದ ಸದರಿ ನಿಗದಿತ ದಿನಾಂಕದೊಳಗೆ ದಾಖಲಾತಿ ಶುಲ್ಕವನ್ನು ಪಾವತಿಸಿ ದಾಖಲಾಗಿರುವುದಿಲ್ಲ. ಕೆಲವು ವಿದ್ಯಾರ್ಥಿಗಳು ದಿನಾಂಕ: 15-07-2019 ರವರೆವಿಗೂ ಕಾಲೇಜುಗಳಲ್ಲಿ ತರಗತಿಗಳಿಗೆ ಹಾಜರಾಗಿರುತ್ತಾರೆ. ಈ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಮತ್ತು ಪೋಷಕರುಗಳ ಮನವಿಗಳನ್ನು ಪುರಸ್ಕರಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ದ್ವಿತೀಯ ಪಿಯುಸಿ ತರಗತಿಗೆ ದಾಖಲಾಗಲು ಕೊನೆಯ ದಿನಾಂಕವನ್ನು ವಿಶೇಷ ದಂಡ ಶುಲ್ಕದೊಂದಿಗೆ (ರೂ.2890/-(ರೂ.2220/- + ರೂ.670/-)) ದಿನಾಂಕ: 29-07-2019 ರವರೆವಿಗೂ ವಿಸ್ತರಿಸಿ ಆದೇಶಿಸಿದೆ.

ವಿಶೇಷ ಸೂಚನೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು/ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ವ್ಯಾಪ್ತಿಯ/ಕಾಲೇಜುಗಳಲ್ಲಿ ದಾಖಲಾಗದೇ ಇರುವ ವಿದ್ಯಾರ್ಥಿಗಳನ್ನು ಖುದ್ದಾಗಿ ಸಂಪರ್ಕಿಸಿ ದಾಖಲಾತಿ ಮಾಡಿಕೊಳ್ಳುವ ಬಗ್ಗೆ ಸೂಕ್ತ ಕ್ರಮವಹಿಸುವುದು.
2. ಅವಶ್ಯಕತೆಯಿದ್ದಲ್ಲಿ ಸದರಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಿ, ಹಾಜರಾತಿಯ ಕೊರತೆ ನೀಗಿಸುವುದು.
3. ಸದರಿ ವಿದ್ಯಾರ್ಥಿಗಳಿಗೆ ಶೇ.75ರಷ್ಟು ಹಾಜರಾತಿ ಪಡೆಯುವ ಷರತ್ತಿಗೊಳಪಟ್ಟು ದಾಖಲಾತಿ ಮಾಡಿಕೊಳ್ಳುವುದು.
4. ಸರ್ಕಾರ/ಇಲಾಖೆಗೆ ದಾಖಲಾತಿ ಶುಲ್ಕ(ವಿಶೇಷ ದಂಡ ಶುಲ್ಕದೊಂದಿಗೆ)ಗಳನ್ನು ಜಮಾ ಮಾಡಲು ನಿಗದಿಪಡಿಸಿರುವ ದಾಖಲಾತಿ ದಿನಾಂಕದ ಮಾರನೇ ಕಾರ್ಯನಿರತ ದಿನಾಂಕದಂದು ಖಜಾನೆಗೆ ಶುಲ್ಕಗಳನ್ನು ಕಡ್ಡಾಯವಾಗಿ ಜಮೆ ಮಾಡುವುದು ಪ್ರಾಂಶುಪಾಲರ/ಆಡಳಿತ ಮಂಡಳಿಯವರ ಪೂರ್ಣ ಜವಾಬ್ದಾರಿಯಾಗಿರುತ್ತದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲ ಗಮನಕ್ಕೆ ತರಲು ಸೂಚಿಸಿದೆ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳ ಮೂಲಕ.
3. ಮಾನ್ಯ ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ
4. ಇ-ಆಡಳಿತ ಶಾಖೆ, ಪಪೂಶಿಇ, ಬೆಂಗಳೂರು-ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು, 5. ಕಚೇರಿ ಪ್ರತಿ.